**ಕರ್ನಾಟಕ ಸರ್ಕಾರ**

ಸಂ:ಡಿ.ವೈ.ಇ.ಎಸ್/ಕ್ರೀಚಕಪ್ರೋ/69/2025-26

ಆಯುಕ್ತರ ಕಾರ್ಯಾಲಯ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ,
ಬೆಂಗಳೂರು-01, ದಿನಾಂಕ: 17-07-2026.

**ಸುತ್ತೋಲೆ**

ವಿಷಯ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಾರ್ಯಕ್ರಮಗಳಡಿ 2025ನೇ ಸಾಲಿನ ನಗದು ಪುರಸ್ಕಾರ ಪ್ರಶಸ್ತಿ ಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026-27 ನೇ ಸಾಲಿನ ಕ್ರೀಡಾ ಕಲ್ಯಾಣ ಯೋಜನೆ ಅಡಿಯಲ್ಲಿ ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅದೀಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ 2025 ನೇ ಸಾಲಿನ ನಗದು ಪುರಸ್ಕಾರ ಯೋಜನೆ ಅಡಿ ಪ್ರೋತ್ಸಾಹಧನ ನೀಡಲು ಅರ್ಜಿಗಳನ್ನು ಆನ್ ಲೈನ್ ಮೂಲಕ ಆಹ್ವಾನಿಸಲಾಗಿದೆ.

ಅಸಕ್ತ ಕ್ರೀಡಾಪಟುಗಳು ಅರ್ಜಿಗಳನ್ನು ಅಧಿಕೃತ ಜಾಲತಾಣ: **https://sevasindu.karnataka.gov.in** ಮೂಲಕ ಕಡ್ಡಾಯವಾಗಿ ಆನ್‌ಲೈನ್ ಮೂಲಕ ನಿಗದಿತ ದಿನಾಂಕದೊಳಗೆ ಸಲ್ಲಿಸಲು ಸೂಚಿಸಲಾಗಿದೆ. ಅರ್ಜಿ ಸಲ್ಲಿಸಲು ಅಂತಿಮ **ದಿನಾಂಕ:31.07.2026 ರಂದು ಕೊನೆಯ ದಿನಾಂಕವಾಗಿರುತ್ತದೆ,** ಈ ಬಗ್ಗೆ ತಮ್ಮ ಜಿಲ್ಲೆಯಲ್ಲಿ ಹೆಚ್ಚು ಪ್ರಚಾರದಲ್ಲಿರುವ ಸ್ಥಳೀಯ ದಿನ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಪತ್ರಿಕಾ ವರದಿ ಪ್ರತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಿದೆ.

**(ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಯುವ ಸಹಾಯವಾಣಿ 155265 ಗೆ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಸೂಚಿಸಿದೆ.**

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಗೆ,

1. ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಕಂಠೀರವ ಕ್ರೀಡಾಂಗಣ.
2. ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು.
3. ಅಧ್ಯಕ್ಷರು, ಕರ್ನಾಟಕ ಒಲಂಪಿಕ್ ಸಂಸ್ಥೆ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
5. ರಾಜ್ಯದ ಎಲ್ಲಾ ಕ್ರೀಡಾ ಸಂಸ್ಥೆಗಳ ಅಧ್ಯಕ್ಷರು/ಕಾರ್ಯದರ್ಶಿಗಳು.
6. ಹೆಚ್ಚುವರಿ ಪ್ರತಿ.

# :ನಗದು ಪುರಸ್ಕಾರ ಮಾರ್ಗಸೂಚಿ:

ಒಲಂಪಿಕ್ಸ್ ಗೇಮ್ಸ್, ಕಾಮನ್ ವೇಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್ ಕ್ರೀಡಾಕೂಟಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಕ್ರೀಡಾಕೂಟಗಳಲ್ಲಿ ಪದಕ ಪಡೆಯುವ ಕ್ರೀಡಾಪಟುಗಳಿಗೆ ವಾರ್ಷಿಕ ಗರಿಷ್ಠ ರೂ. 5.00 ಲಕ್ಷಗಳ ಅಥಾವ ವಾರ್ಷಿಕ ಅತ್ಯುತ್ತಮ ಎರಡು ಸಾಧನೆಯನ್ನು ಪರಿಗಣಿಸಿ ಯಾವುದು ಕಡಿಮೆಯೊ ಆ ಮೊತ್ತಕ್ಕೆ ನಗದು ಬಹುಮಾನವನ್ನು ಸೀಮಿತಗೊಳಿಸುವುದು.

- ನಗದು ಪುರಸ್ಕಾರವನ್ನು ಕರ್ನಾಟಕದ ಕ್ರೀಡಾಪಟುಗಳಿಗೆ ಮಾತ್ರ ಪರಿಗಣಿಸುವುದು.
- ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಭಾರತ ಸರ್ಕಾರದಿಂದ ಅಂಗೀಕೃತವಾದಂತಹ ರಾಷ್ಟ್ರೀಯ ಕ್ರೀಡಾ ತಂಡಗಳಿಗೆ ಆಯ್ಕೆಯಾಗಿ ಭಾರತವನ್ನು ಪ್ರತಿನಿಧಿಸುತ್ತಿರುವ ಅಂತರಾಷ್ಟ್ರೀಯ ಕ್ರೀಡಾಕೂಟಗಳಿಗೆ ಮಾತ್ರ ಪರಿಗಣಿಸುವುದು.
- ಕ್ರೀಡಾಪಟುಗಳು ಕರ್ನಾಟಕ ಮೂಲದವರಾಗಿದ್ದು ರಾಜ್ಯದ ಹೊರಗಡೆ ವಾಸಿಸುತ್ತಿರುವ ಬೇರೆ ರಾಜ್ಯ ಅಥವಾ ಕ್ರೀಡಾ ತಂಡಗಳನ್ನು ಪ್ರತಿನಿಧಿಸುವ ಕ್ರೀಡಾಪಟುಗಳು ನಗದು ಪುರಸ್ಕಾರಕ್ಕೆ ಅರ್ಹರಾಗಿರುವುದಿಲ್ಲ.
- ಅಂತರಾಷ್ಟ್ರೀಯ ಕ್ರೀಡಾಕೂಟಕ್ಕೆ ಕ್ರೀಡಾಪಟು ಯಾವ ರಾಜ್ಯವನ್ನು ಅಥವಾ ವಾಸಿಸುತ್ತಿರುವ ಯಾವ ಸಂಸ್ಥೆಯನ್ನು ಪ್ರತಿನಿಧಿಸಿ ಆಯ್ಕೆಯಾಗಿದ್ದಾರೆ ಎಂಬುದರ ಬಗ್ಗೆ ಭಾರತ ಸರ್ಕಾರದ ಮಾನ್ಯತೆ ಪಡೆದ ಸಂಬಂಧಪಟ್ಟ ಕ್ರೀಡೆಯ ರಾಷ್ಟ್ರೀಯ ಫೆಡರೇಷನ್/ಭಾರತೀಯ ಕ್ರೀಡಾ ಪ್ರಾಧಿಕಾರ ಇವರಿಂದ ದೃಢೀಕರಣ ಪತ್ರ ಒದಗಿಸತಕ್ಕದ್ದು.
  ಯಾವುದೇ ಅಂತರಾಷ್ಟ್ರೀಯ ಕ್ರೀಡಾ ಸ್ಪರ್ಧೆಯಲ್ಲಿ ನೇರ /ಆಹ್ವಾನಿತ ಕ್ರೀಡಾಕೂಟಗಳಲ್ಲಿ ಭಾಗವಹಿಸುವಂತ ಕ್ರೀಡಾಪಟುಗಳಿಗೆ ಈ ಪುರಸ್ಕಾರ ನೀಡಲು ಅವಕಾಶವಿರುವುದಿಲ್ಲ.
- ಅಂತರಾಷ್ಟ್ರೀಯ ಸಂಸ್ಥೆ ಮತ್ತು ಇತರೆ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು ನಡೆಸುವ ಅಧಿಕೃತ ಕ್ರೀಡಾಕೂಟಗಳಿಗೆ ಮಾತ್ರ ನಗದು ಪುರಸ್ಕಾರ ನೀಡಲಾಗುವುದು.
- ಭಾಗವಹಿಸಿದ ಕ್ರೀಡಾಪಟುಗಳು ರಾಜ್ಯ ಕ್ರೀಡಾ ಸಂಸ್ಥೆಯ ಮುಖಾಂತರ ದೃಢೀಕರಣದೊಂದಿಗೆ ದಾಖಲಾತಿಯನ್ನು ಸಲ್ಲಿಸತಕ್ಕದ್ದು.
- ನಗದು ಪುರಸ್ಕಾರಕ್ಕೆ ಭಾಜನರಾಗುವ ಕ್ರೀಡಾಪಟುಗಳಿಗೆ ಅನುದಾನವನ್ನು ಆದರಿಸಿ ನೀಡಲಾಗುವುದು.
  1. ಇಲಾಖೆಯಿಂದ ನೀಡಬೇಕಾದ ನಗದು ಪುರಸ್ಕಾರದ ಮೊತ್ತವನ್ನು 5 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ನೀಡುವುದು.
  2. ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವಾಗ ಧರಿಸುವ ಸಮವಸ್ತ್ರಗಳಲ್ಲಿ ಇಲಾಖೆಯ ಲಾಂಛನ ಬಳಸುವುದು (ಸ್ಪರ್ಧೆಗಳ ನಿಯಮಗಳಲ್ಲಿ ಅವಕಾಶವಿದ್ದಲ್ಲಿ ಮಾತ್ರ)
  3. ನಗದು ಪುರಸ್ಕಾರವನ್ನು ಪಡೆಯುವ ಸಾಧಕ ಕ್ರೀಡಾಪಟುಗಳು ವಾರ್ಷಿಕ 30 ದಿನಗಳನ್ನು ಇಲಾಖೆಯ ಕ್ರೀಡಾ ಪ್ರೋತ್ಸಾಹ/ಉತ್ತೇಜನ ಕಾರ್ಯಗಳಲ್ಲಿ ಭಾಗವಹಿಸಲು ಕಡ್ಡಾಯವಾಗಿ ಮೀಸಲಿ ಪಾಲ್ಗೊಳ್ಳನ ಸೂಚಿಸಿದೆ.

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ